ವರ್ಷ		ಯೋಜನೇತರ	ಯೋಜನೆ
೧೯೮೨-೮೩	ರೂ.	೭೦,೫೯,೨೫೩	೩,೦೫,೪೬೪
೧೯೮೩-೮೪	ರೂ.	೭೦,೪೪,೪೯೨	೧೧,೨೪,೦೨೩
೧೯೮೪-೮೫	ರೂ.	೮೨,೬೭,೮೦೦	೯,೦೦,೦೦೦
ಒಟ್ಟು	ರೂ.	೨,೨೩,೫೧,೫೨೫	೨೩,೯೯,೪೮೭

ಯೋಜನೇತರ	ರೂ.	೨,೨೩,೫೧,೫೨೫
ಯೋಜನೆ	ರೂ.	೨೩,೯೯,೪೮೭
ಒಟ್ಟು	ರೂ.	೨,೪೬,೮೧,೦೧೨

ಗುಲ್ಬರ್ಗಾದ ಸರ್ಕಾರಿ ಜನರಲ್ ಆಸ್ಪತ್ರೆಯಲ್ಲಿ ಈಗ ಕೆಲಸ ಮಾಡುತ್ತಿರುವ ವೈದ್ಯರುಗಳು, ದಾದಿಯರು ಸಹಾಯಕ ಶುಶ್ರೂಷಣ ದಾದಿಯರು ಮತ್ತು ಇತರೆ ಸಿಬ್ಬಂದಿ ವರ್ಗದವರ ವಿವರಗಳು ಕೆಳಕಂಡಂತಿವೆ:—

ವೈದ್ಯರುಗಳು	೪೨
ದಾದಿಯರು (ನರ್ಸ್)	೧೩೩
ಸಹಾಯಕ ಶುಶ್ರೂಷಣ ದಾದಿಯರು	೮
ಇತರೆ ಸಿಬ್ಬಂದಿ ವರ್ಗ	೩೩೮

೪) ದಿನಾಂಕ ೮-೬-೧೯೮೩ ರಂದು ಗುಲ್ಬರ್ಗಾದ ಮೆಸರ್ಸ್ ಉದಯಗಿರಿ ಇಂಡಸ್ಟ್ರೀಸ್ ರವರಿಂದ ರೂ ೧೮,೫೦೦.೦೦ ಮೌಲ್ಯದ ಹಾಸಿಗೆಗಳನ್ನು ಖರೀದಿಸಲಾಯಿತು.

(ಶ್ರೀ ಕೆ.ಬಿ. ಶಾಣಪ್ಪನವರ ಪರವಾಗಿ ಶ್ರೀ ಮಾಲೀಕಯ್ಯ ಗುತ್ತೇದಾರ್)

ಶ್ರೀ ಮಾಲೀಕಯ್ಯ ಗುತ್ತೇದಾರ್. —ಅಧ್ಯಕ್ಷರೇ, ಆ ಆಸ್ಪತ್ರೆಯಲ್ಲಿ ಇನ್ನೂ ಹಳೆಯ ಗಾದಿಗಳು ಹೊಲಸು ಹಾಸಿಗೆಗಳು ಇವೆ ಇದನ್ನು ಪರಿಶೀಲಿಸಲು ಮಾನ್ಯ ಮಂತ್ರಿಗಳು ಸದನದ ಒಂದು ಸಮಿತಿಯನ್ನು ರಚನೆ ಮಾಡಿ ಅಲ್ಲಿಗೆ ಕಳುಹಿಸಲು ತಯಾರಾಗಿದ್ದಾರೆಯೇ. ಎಂದು ನಾನು ಕೇಳುತ್ತೇನೆ.

ಡಾ॥ ಎಚ್. ಎಲ್. ತಿಮ್ಮೇಗೌಡ. —ಅದರ ಅವಶ್ಯಕತೆ ಇಲ್ಲ.

ಡಾ॥ ಎಂ. ಮಲ್ಲಿಕಾರ್ಜುನ ಖರ್ಗೆ. —ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಇಷ್ಟೆ. ೧೮,೫೦೦ ರೂಪಾಯಿಗಳ ಮೌಲ್ಯದ ಹಾಸಿಗೆಗಳನ್ನು ಮೆಸರ್ಸ್ ಉದಯಗಿರಿ ಇಂಡಸ್ಟ್ರೀಸ್‌ನಿಂದ ಪರ್ಚೇಸ್ ಮಾಡಿ ಆಸ್ಪತ್ರೆಗೆ ಹಾಕಿದ್ದೇವೆ ಎಂದು ತಪ್ಪು ಉತ್ತರದಲ್ಲಿ ಹೇಳುತ್ತಾ ಇದ್ದೀರಿ, ಇದು ಸತ್ಯಕ್ಕೆ ದೂರವಾದುದು. ಅಲ್ಲಿ ಹೊಸದಾಗಿ ಬಂದುದು ಏನೂ ಇಲ್ಲ. ಅಕೌಂಟ್‌ನಲ್ಲಿ ಮಾತ್ರ ಹೊಸದು ಎಂದು ತೋರಿಸಿದ್ದಾರೆ. ಇದರ ಬಗ್ಗೆ ವಿಚಾರಣೆ ಮಾಡಿ ಎಂದು ಹೇಳುತ್ತಿದ್ದಾರೆ.

ಡಾ॥ ಎಚ್. ಎಲ್. ತಿಮ್ಮೇಗೌಡ. —ಮಾನ್ಯ ಸದಸ್ಯರು ಸದನದ ಸಮಿತಿಯನ್ನು ಮಾಡಿ ಅಲ್ಲಿಗೆ ಕಳುಹಿಸಿ ಎಂದು ಹೇಳಿದರು. ಅದರ ಅವಶ್ಯಕತೆ ಇಲ್ಲ ಎಂದು ಹೇಳಿದ್ದೇನೆ. ಒಂದು ವೇಳೆ ಯಾರು ತಪ್ಪು ಮಾಡಿದ್ದರೂ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. D.H.O. ರವರನ್ನು ಅಲ್ಲಿಗೆ ಕಳುಹಿಸಿ, ವಿಷಯವನ್ನು ವಿಚಾರಿಸಿ. ಇದಕ್ಕೆ ಜವಾಬ್ದಾರರು ಯಾರೆಂದು ತಿಳಿದು ಕ್ರಮ ತೆಗೆದುಕೊಳ್ಳುತ್ತೇನೆ.

೧೯೮೫-೮೬ನೇ ವರ್ಷವನ್ನು ಮಿತವ್ಯಯವಾಗಿ ಪರಿಗಣಿಸುವ ಬಗ್ಗೆ

೨೯೭ (೪೯೦) ಶ್ರೀ ಶಿವನಂಜಪ್ಪ (ಗುಬ್ಬಿ). —ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಉತ್ತರಿಸುವರೇ :—

ಅ) ೧೯೮೫-೮೬ನೇ ಸಾಲನ್ನು 'ಮಿತವ್ಯಯ' ವರ್ಷವಾಗಿ ಆಚರಿಸಲಾಗುತ್ತಿದೆಯೇ ? ಹಾಗಿದ್ದಲ್ಲಿ ಪ್ರತಿಯೊಂದು ಇಲಾಖೆಯಲ್ಲಿ ಮಾಡಿರುವ ವರ್ಗಾವಣೆಗಳ ಸಂಖ್ಯೆ ಎಷ್ಟು ? ಇದರಿಂದ ಸರ್ಕಾರಕ್ಕೆ ವೆಚ್ಚವಾಗಿರುವ ಹಣದ ಮೊತ್ತವೆಷ್ಟು ?

ಆ) ವರ್ಗಾವಣೆ ಬಗ್ಗೆ ಒಂದು ವಿಶೇಷವಾದ ನೀತಿ ಸಂಹಿತೆಯನ್ನು ರೂಪಿಸಲು ಸಾಧ್ಯವಾಗುತ್ತದೆಯೇ. ಸಾಧ್ಯವಿದ್ದಲ್ಲಿ ಇದನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ಇಲ್ಲ. ೧೯೮೫-೮೬ನೇ ವರ್ಷದಲ್ಲಿ ಯೋಜನೇತರ ವ್ಯಯವನ್ನು ಮಿತಗೊಳಿಸಲು ಕೆಲವು ಮಿತವ್ಯಯ ಕ್ರಮಗಳನ್ನು ಅಳವಡಿಸಿ ದಿನಾಂಕ ೫-೭-೮೫ ರಂದು ಸರ್ಕಾರಿ ಆದೇಶ ಹೊರಡಿಸಲಾಗಿದೆ. ಸರ್ಕಾರಿ ನೌಕರರ ವರ್ಗಾವಣೆ ಬಗ್ಗೆ ಯಾವ ರೀತಿಯ ತಡೆಯನ್ನು ಹಾಕಿಲ್ಲ. ಸರ್ಕಾರಿ ನೌಕರರ ವರ್ಗಾವಣೆ ಬಗ್ಗೆ ಹೊರಡಿಸಿರುವ ಕಾರ್ಯನೀತಿ ಹಾಗೂ ಸೂಚನೆಗಳ ಪ್ರಕಾರ ಅನೇಕ ನೇಮಕಾತಿ ಅಧಿಕಾರಿಗಳು ಅಥವಾ ವರ್ಗಾವಣೆ ಮಾಡುವ ಅಧಿಕಾರಿಗಳು ಅವರ ನಿಯಂತ್ರಣಕ್ಕೊಳಪಟ್ಟ ಸರ್ಕಾರಿ ನೌಕರರ ವರ್ಗಾವಣೆಯನ್ನು ಏಪ್ರಿಲ್‌ನಿಂದ ಜೂನ್ ತಿಂಗಳಿನವರೆಗೆ ಅಂದರೆ ಶಾಲೆಗೆ ರಜೆಯಿರುವ ಸಮಯದಲ್ಲಿ ಮಾಡಿದ್ದಾರೆ. ವಿವಿಧ ಇಲಾಖೆಗಳಿಂದ/ ಅಧಿಕಾರಿಗಳಿಂದ ವರ್ಗಾವಣೆಯಾಗಿರುವ ನೌಕರರ ಖಚಿತ ಸಂಖ್ಯೆ ಹಾಗೂ ಅದಕ್ಕಾಗಿ ವ್ಯಯವಾಗಿರುವ ಹಣದ ಮೊತ್ತದ ಬಗ್ಗೆ ಮಾಹಿತಿ ಸಧ್ಯಕ್ಕೆ ಇಲ್ಲ.

ಆ) ಸರ್ಕಾರವು ಆಗಿಂದಾಗ್ಗೆ ಅನೇಕ ಮಾರ್ಗಸೂಚಿಗಳು/ಸೂಚನೆಗಳನ್ನು ಸರ್ಕಾರಿ ನೌಕರರ ವರ್ಗಾವಣೆ ಬಗ್ಗೆ ಹೊರಡಿಸಿದೆ. ಈ ಮಾರ್ಗಸೂಚಿಗಳು/ಸೂಚನೆಗಳು ಒಂದು ಸಂಹಿತೆಯಾಗುತ್ತದೆ. ಸಾರ್ವಜನಿಕ ಹಿತಕ್ಕೆ ಅನಗತ್ಯ ಧಕ್ಕೆ ಬರದಂತೆ ಈ ವಿಷಯದಲ್ಲಿ ತೀರ ಕಟ್ಟುನಿಟ್ಟಾದ ನಿರ್ಬಂಧಗಳನ್ನು ಹಾಕಿಕೊಳ್ಳಲು ಸಾಧ್ಯವಾಗಲಾರದು.

(ಶ್ರೀ ಜಿ.ಎಸ್. ಶಿವನಂಜಪ್ಪನವರ ಪರವಾಗಿ ಆರ್. ರಾಮಯ್ಯ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ವರ್ಗಾವಣೆ ಬಗ್ಗೆ ಸರಕಾರದವರು ಹಾಕಿಕೊಂಡಂತಹ ನೀತಿ ಏನು ಎಂದು ಕೇಳಿದ್ದಾರೆ. ಈ ವರ್ಷ ಮೇ ೬ನೇ ತಾರೀಖಿಗೆ ನಾನೇ ಒಂದು ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೇನೆ. ಇದನ್ನು ಎಲ್ಲಾ ಅಧಿಕಾರಿಗಳಿಗೂ ಮುಖ್ಯ ಕಾರ್ಯದರ್ಶಿಯವರ ಮುಖಾಂತರ ಕಳುಹಿಸಲಾಗಿದೆ. ಅದನ್ನು ಇಲ್ಲಿ ತಮ್ಮ ಅವಗಾಹನೆಗಾಗಿ ಓದಿ ಹೇಳಿದರೆ ಒಳ್ಳೆಯದು ಎಂದು ಭಾವಿಸುತ್ತೇನೆ.

ಮುಖ್ಯಮಂತ್ರಿಗಳ ಸೂಚನೆ

ಸರ್ಕಾರಿ ನೌಕರರ ವರ್ಗಾವಣೆಯ ವಿಷಯದಲ್ಲಿ ಈ ಕೆಳಗೆ ಕಾಣಿಸಿದ ಸೂಚನೆಗಳು ಕೂಡಲೇ ಜಾರಿಯಲ್ಲಿ ಬರುವಂತೆ ಸಂಬಂಧಪಟ್ಟ ಎಲ್ಲರಿಗೂ ಸೂಕ್ತ ಆದೇಶವನ್ನು ಕಳಿಸಬೇಕು.

೧) ಮೂರು ವರ್ಷಗಳಿಗೂ ಕಡಿಮೆ ಅವಧಿಯ ವರ್ಗಾವಣೆಯನ್ನು ಅವಧಿಪೂರ್ವ ವರ್ಗಾವಣೆಯೆಂದು ತಿಳಿಯಬೇಕು, ಹಾಗೂ ಅವುಗಳನ್ನು ನನ್ನ ಸಮ್ಮತಿ ಇಲ್ಲದೇ ಮಾಡಕೂಡದು. ಈ ನಿಯಮವನ್ನು ಉಲ್ಲಂಘಿಸುವ ಎಲ್ಲಾ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮಗಳನ್ನೂ ಜರುಗಿಸಬೇಕು.

೨) ಎಲ್ಲಾ ಸಾಮಾನ್ಯ ವರ್ಗಾವಣೆಗಳನ್ನೂ ಏಪ್ರಿಲ್ ಹಾಗೂ ಮೇ ತಿಂಗಳಿನಲ್ಲಿಯೇ ಪೂರೈಸಬೇಕು. ಸಾಮಾನ್ಯ ವರ್ಗಾವಣೆಯ ವೇಳೆಯಲ್ಲಿ ''ಗ್ರೂಪ್-ಸಿ'' ವರ್ಗಕ್ಕೆ ಸೇರಿದ ಸರ್ಕಾರೀ ನೌಕರರ ಅವಧಿಪೂರ್ವ ವರ್ಗಾವಣೆಗಳಿಗೆ ಸಂಬಂಧಪಟ್ಟ ಸಚಿವರು ಅನುಮತಿ ಕೊಡಬೇಕು. ಸಾಮಾನ್ಯ ವರ್ಗಾವಣೆಗಳನ್ನು ಹೊರತುಪಡಿಸಿ, ಉಳಿದ ಕಾಲದಲ್ಲಿ ಮಾಡಲಾಗುವ ಅವಧಿಪೂರ್ವ ವರ್ಗಾವಣೆಗಳಿಗೆ ನನ್ನ ಸಮ್ಮತಿ ಪಡೆಯಲೇ ಬೇಕು.

೩) ವರ್ಗಾವಣೆಗಳನ್ನು ಮಾಡಲು ಅಧಿಕಾರವುಳ್ಳ ಎಲ್ಲಾ ಅಧಿಕಾರಿಗಳು ಸರ್ಕಾರೀ ನೌಕರರು ಮೂರು ವರ್ಷದ ಅವಧಿಯನ್ನು ಪೂರೈಸಿದ ನಂತರ ಅವರಿಂದ ಬರಬಹುದಾದ ವಿನಂತಿಗಳನ್ನು ಹಾಗೂ

ಆಡಳಿತದ ಅವಶ್ಯಕತೆಗಳನ್ನು ಗಣನೆಗೆ ತೆಗೆದುಕೊಂಡು ವರ್ಗಾವಣೆಗಳನ್ನು ಮಾಡಬೇಕು. ವರ್ಗಾವಣೆ ಗಳನ್ನು ಮಾಡುವ ಅಧಿಕಾರಗಳನ್ನು ಆಯಾಯ ಮಟ್ಟಗಳಲ್ಲಿ ವಿಕೇಂದ್ರೀಕರಿಸಲಾಗಿದ್ದು ಈ ಅಧಿಕಾರ ಗಳನ್ನು ನನ್ನ ಅನುಮತಿ ಇಲ್ಲದೆ ವಾಪಸ್ಸು ಪಡೆಯಕೂಡದು.

೪) ಯಾವುದೇ ಇಲಾಖೆಯ ಆಡಳಿತಕ್ಕೆ ಸಂಬಂಧವಿರದ ಜನರ ಹಾಗೂ ಅಧಿಕಾರೇತರರ ವಿನಂತಿಗಳನ್ನು ರಾಜಕೀಯ ಒತ್ತಡವೆಂದು ಪರಿಗಣಿಸಬೇಕು, ಮತ್ತು ಇಂತಹ ಪ್ರಕರಣಗಳಲ್ಲಿ ಶಿಸ್ತಿನ ಕ್ರಮಗಳನ್ನು ಕಟ್ಟುನಿಟ್ಟಾಗಿ ಜರುಗಿಸಬೇಕು. ರಾಜಕೀಯ ಒತ್ತಡಗಳನ್ನು ತರುವ ಸರ್ಕಾರೀ ನೌಕರನ ರಹಸ್ಯ ವರದಿಯ ಜೊತೆಗೆ ಒತ್ತಡ ತಂದುದರ ಬಗೆಗೆ ಒಂದು ಪ್ರಮಾಣ ಪತ್ರವನ್ನೂ ಇರಿಸಬೇಕು.

೫) ಬೇರೆ ಸರ್ಕಾರಿ ನೌಕರನ ವಿನಂತಿಯನ್ನು ಮಾನ್ಯ ಮಾಡುವುದಕ್ಕಾಗಿ ಮೂರು ವರ್ಷಗಳ ಅವಧಿಯನ್ನು ಪೂರ್ಣಗೊಳಿಸದ ಯಾವುದೇ ಸರ್ಕಾರೀ ನೌಕರರನ್ನು ವರ್ಗಾವಣೆ ಮಾಡಕೂಡದು.

೬) ತಮಗೆ ಸಂಬಂಧವಿಲ್ಲದ ಇಲಾಖೆಗಳ ಸಿಬ್ಬಂದಿ ವರ್ಗಗಳ ಬಗ್ಗೆ ಯಾವ ಸಚಿವರೂ ನಡೆವಳಿಗಳನ್ನು ಕಳುಹಿಸಕೂಡದು.

೭) ಎ. ಮತ್ತು ಬಿ. ವರ್ಗದ ಸರ್ಕಾರೀ ಅಧಿಕಾರಿಗಳನ್ನು ಅವರ ಸ್ವಂತ ಊರುಗಳು ಮತ್ತು ತಾಲ್ಲೂಕುಗಳಿಗೆ ನೇಮಿಸಬಾರದು.

೮) ಸರ್ಕಾರಿ ನೌಕರರ ವಿನಂತಿಯ ಮೇರೆಗೆ ಮಾಡಿದ ವರ್ಗಾವಣೆ ಪ್ರವಾಸ ಭತ್ಯವನ್ನು ಕೊಡಬಾರದು ಮತ್ತೆ ಒತ್ತಾಯವನ್ನು ತರಬಾರದು. ಇದನ್ನು ಕಡ್ಡಾಯವಾಗಿ ಆಚರಣೆಗೆ ತರಬೇಕಾಗುವುದು.

೯) ಸರ್ಕಾರಿ ಹಾಗೂ ಅರೆ ಸರ್ಕಾರಿ ಸಂಸ್ಥೆಗಳಿಗೆ ನಿಯೋಜಿಸಲ್ಪಟ್ಟ ಸರ್ಕಾರಿ ನೌಕರರಿಗೂ ಮೇಲಿನ ವರ್ಗಾವಣೆಯ ನಿಯಮ ಅನುಸರಿಸಬೇಕು.

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೇ ೧೯೮೩ ರಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದಾಗ ಕಾಂಗ್ರೆಸ್ ಪಕ್ಷದವರು ನೇಮಿಸಿದ ಅಧಿಕಾರಿಗಳು ಇದ್ದರೆ ನಮ್ಮ ಕೆಲಸಕಾರ್ಯಗಳು ಸುಗಮವಾಗಿ ನಡೆಯುವುದಿಲ್ಲವೆಂದು ತಿಳಿದುಕೊಂಡು ಬೇಕಾಬಿಟ್ಟಿಯಾಗಿ ವರ್ಗಾವಣೆಯನ್ನು ಮಾಡಿ ಸುಮಾರು ಒಂದು ಕೋಟಿ ರೂಪಾಯಿಗಳು ಸರ್ಕಾರಕ್ಕೆ ಖರ್ಚು ಆಯಿತು. ಆದರೆ ೧೯೮೫–೮೬ನೇ ಸಾಲಿನಲ್ಲಿ ಮಿತವ್ಯಯವನ್ನು ಸಾಧಿಸುವುದಕ್ಕಾಗಿ ವರ್ಗಾವಣೆಗಳಲ್ಲಿ ಒಂದು ನೀತಿ ಸಂಹಿತೆಯನ್ನು ಮಾಡಿದ್ದಾರೆ. ಇದು ಒಂದು ರಾಜಕೀಯದ ದುರುದ್ದೇಶವೆಂದು ನನಗನಿಸುತ್ತದೆ. ಸ್ವಾಮಿ, ನಾನು ಒಂದು ಉದಾಹರಣೆಯನ್ನು ಇಲ್ಲಿ ಹೇಳಬೇಕೆಂದರೆ ನಾವು ಶಿಫಾರಸ್ಸು ಮಾಡಿ ಕಳುಹಿಸಿದ ಅದೂ ನನ್ನ ಕ್ಷೇತ್ರದ ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜನಿಯರ್ (ಕೆ. ಇ. ಬಿ.)ಯವರನ್ನು ಸಸ್ಪೆಂಡ್ ಮಾಡಿರುವಂತಹ ಪ್ರಸಂಗ ನಡೆದಿದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಅಧಿಕಾರಿಗಳನ್ನು ವರ್ಗಾವಣೆ ಮಾಡುವಾಗ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಯಾವುದೇ ದುರುದ್ದೇಶವನ್ನು ಇಟ್ಟುಕೊಂಡು ವರ್ಗಾವಣೆ ಮಾಡುವುದಿಲ್ಲ. ಯಾವುದಾದರೂ ನಿರ್ದಿಷ್ಟವಾದ ಕೇಸು ಇದ್ದರೆ ಅದನ್ನು ದಯಮಾಡಿ ಹೇಳಲಿ. ಆ ಬಗ್ಗೆ ನಾನು ತನಿಖೆ ಮಾಡುತ್ತೇನೆ.

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೇ ಇದುವರೆವಿಗೂ ಮಾನ್ಯ ಮುಖ್ಯಮಂತ್ರಿಗಳು ೯ ವಿಷಯಗಳನ್ನೊಳಗೊಂಡಂತಹ ಒಂದು ನೀತಿ ಸಂಹಿತೆಯನ್ನು ಓದಿದರು. ಅದರಲ್ಲಿ ಅಯಾಯ ತಾಲ್ಲೂಕು ಅಧಿಕಾರಿಗಳು ಕಟ್ಟುನಿಟ್ಟಾಗಿ ಇರುವುದಕ್ಕೆ ಬರುವುದಿಲ್ಲ. ಈಗ ವಿದ್ಯಾ ಇಲಾಖೆಯನ್ನು ತೆಗೆದುಕೊಂಡರೆ ಆ ಹಳ್ಳಿಯ ಉಪಾಧ್ಯಾಯರೇ ಅಲ್ಲ ಉಪಾಧ್ಯಾಯರಾಗಿ ಸುಮಾರಾಗಿ ೧೦–೧೫ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ, ಮತ್ತು ನನ್ನ ಕ್ಷೇತ್ರದಲ್ಲಿ ಒಬ್ಬ ರೆವಿನ್ಯೂ ಇನ್ಸ್‌ಪೆಕ್ಟರ್ ಸುಮಾರು ೧೦–೧೨ ವರ್ಷಗಳಿಂದ ಒಂದೇ ಕಡೆ ಇದ್ದಾರೆ. ಆ ಬಗ್ಗೆ ನಾನು ಸಂಬಂಧಪಟ್ಟ ಮಾನ್ಯ ಮಂತ್ರಿಗಳ ಬಗ್ಗೆ ಕೂಡ ಪತ್ರ ಬರೆದು ತಿಳಿಸಿದ್ದೇನೆ. ಇದುವರೆವಿಗೂ ಯಾವುದೇ ಕ್ರಮ ತೆಗೆದು ಕೊಂಡಿಲ್ಲ. ಇದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಹೇಳುತ್ತಿರುವ ಪ್ರಾತಿನಲ್ಲಿ ಸ್ವಲ್ಪ ಮಟ್ಟಿಗೆ ಅರ್ಥ ಇದೆ. ನಿಜವಾಗಿಯೂ ಶಿಕ್ಷಣ ಇಲಾಖೆಯಲ್ಲಿ ಆದರಲ್ಲಿಯೂ ಕೂಡ ಪ್ರಾಥಮಿಕ ಶಾಲಾ ಉಪಾಧ್ಯಾಯರು ತಮ್ಮ ಸ್ವಂತ ಹಳ್ಳಿಯಲ್ಲಿ ಮತ್ತು ತಾಲ್ಲೂಕುಗಳಲ್ಲಿ ಇದ್ದುಕೊಂಡು ತಮ್ಮ ಹಾಜರಿಯನ್ನು ಹಾಕಿ ತಮ್ಮ ಸ್ವಂತ ಕೆಲಸಗಳನ್ನು ಮಾಡಿಕೊಳ್ಳುವುದಕ್ಕೆ ಹೋಗುತ್ತಾರೆ ಎನ್ನುವುದು ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಈ ವರ್ಷ ನಾವು ಜಾರಿಗೆ ತರುವುದಕ್ಕೆ ಸಾಧ್ಯವಾಗಲಿಲ್ಲ. ಬರುವ ವರ್ಷದಿಂದ ಯಾವುದೇ ಶಾಲಾ ಶಿಕ್ಷಕರು ತಮ್ಮ ಸ್ವಂತ ಹಳ್ಳಿಯಲ್ಲಿಯೇ ಆಲ್ಲದೆ ತಮ್ಮ ಸ್ವಂತ ತಾಲ್ಲೂಕಿನಲ್ಲಿ ಕೂಡ ಇರುವುದಕ್ಕೆ ನಾವು ಬಿಡುವುದಿಲ್ಲ. ಪಕ್ಕದ ತಾಲ್ಲೂಕುಗಳಿಗೆ ನಾವು ಪೋಸ್ಟ್ ಮಾಡುತ್ತೇವೆ.

ಶ್ರೀ ಬಿ. ಯಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಪ್ರಾಮಾಣಿಕವಾಗಿ ದುಡಿಯುತ್ತಿರುವ ಶಿಕ್ಷಕರಿಗೆ ಏತಕ್ಕೆ ಈ ಶಿಕ್ಷೆ ? ಇದರಿಂದ ಪ್ರಾಮಾಣಿಕವಾಗಿ ಕೆಲಸ ಮಾಡುವವರಿಗೆ ತೊಂದರೆಯಾಗುವುದಿಲ್ಲವೆ ?

ಶ್ರೀ ರಾಮಕೃಷ್ಣ ಹೆಗಡೆ.—ಪ್ರಾಮಾಣಿಕವಾದ ಸೇವೆಯನ್ನು ಪಕ್ಕದ ತಾಲ್ಲೂಕಿನಲ್ಲಿ ಬೇಕಾದರೆ ಅವರು ಸಲ್ಲಿಸಬಹುದು.

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಮುಖ್ಯಮಂತ್ರಿಗಳು ವರ್ಗಾವಣೆಗೆ ಸಂಬಂಧಪಟ್ಟಂತಹ ನೀತಿ ಸಂಹಿತೆಯನ್ನು ಓದಿದರು. ಅದರಲ್ಲಿ ಎಕ್ಸಿಕ್ಯೂಟಿವ್ ಆಗಿ ಇರುವವರು ತಮ್ಮ ಸ್ವಂತ ತಾಲ್ಲೂಕುಗಳಲ್ಲಿ ಇರಬಾರದೆಂದು ಹೇಳಿದ್ದಾರೆ. ಆದರೆ ನನ್ನ ಕ್ಷೇತ್ರದಲ್ಲಿ ಒಬ್ಬ ತಹಶೀಲ್ದಾರರವರು ಸುಮಾರು ೧೦ ವರ್ಷಗಳಿಂದ ಪುತ್ತೂರಿನಲ್ಲಿಯೇ ಕೆಲಸ ಮಾಡುತ್ತಿದ್ದಾರೆ. ನಾನು ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೂ ಈ ವಿಷಯವನ್ನು ತಂದಿದ್ದರೂ ಸಹ ಇದುವರೆವಿಗೂ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಶ್ರೀಮಾನ್ ರಾಮಯ್ಯನವರು ಮಾತನಾಡುತ್ತಾ ಉದಾಹರಣೆ ಸಮೇತ ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಇದರಲ್ಲಿ ನನಗೆ ಸ್ವಲ್ಪ ಮಟ್ಟಿಗೆ ಅನುಮಾನ ಬರುತ್ತಿದೆ. ಏನೆಂದರೆ ಸರ್ಕಾರದಲ್ಲಿ ಜಾತಿಯ ಪ್ರಭಾವ ವಿರುವವರಿಗೆ ಮಾತ್ರ ಆಶ್ರಯ ಸಿಗುತ್ತದೆಯೋ ಏನೋ ಎಂದು. ನಾನು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ.

ಅಧ್ಯಕ್ಷರು.—ನಿರ್ದಿಷ್ಟವಾದ ವಿಷಯವಿದ್ದರೆ ಹೇಳಿ. ಆಪಾದನೆ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ ನಾನು ನಿರ್ದಿಷ್ಟವಾದ ವಿಷಯವನ್ನು ಹೇಳುವುದಕ್ಕೆ ಬರುತ್ತಿದ್ದೇನೆ. ಮಾನ್ಯ ಸದಸ್ಯರು ಹೇಳಿದ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಮಲ್ಲಪ್ಪ ಎಂಬುವವರನ್ನು.....

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಹೊಸಬರು ಆವರಿಗೆ ಗೊತ್ತಿಲ್ಲ ಈ ಸಮಯದಲ್ಲಿ ಯಾವುದೇ ಆರೋಪ, ಆಪಾದನೆ ಮಾಡುವುದಕ್ಕೆ ಬರುವುದಿಲ್ಲ. ಮಾನ್ಯ ಸದಸ್ಯರಿಗೆ ಏನಾದರೂ ತೊಂದರೆ ಇದ್ದರೆ ಪ್ರಶ್ನೆ ಕೇಳಬಹುದು. ತಾವು ಆರೋಪ ಮಾಡುವುದಾದರೆ ಡಿಮ್ಯಾಂಡ್ ಬರುತ್ತದೆ. ಅಥವಾ ಇಲಾಖೆಯ ರಿಪೋರ್ಟ್ ಮೇಲೆ ಚರ್ಚೆ ಪ್ರಾರಂಭವಾಗುತ್ತದೆ ಆಗ ಏನಾದರೂ ವಿಷಯಗಳು ಇದ್ದರೆ ಚರ್ಚೆ ಮಾಡಿ ಸರ್ಕಾರದ ಗಮನಕ್ಕೆ ತರಬಹುದು.

ಶ್ರೀ ಯು. ಭೂಪತಿ.—ಮಾನ್ಯ ಸದಸ್ಯರು ಉದಾಹರಣೆಯನ್ನು ಕೊಟ್ಟು ಪ್ರಸ್ತಾಪ ಮಾಡಿದ್ದರಿಂದ ನಾನು ಮಾತನಾಡುವಂತಹ ಪ್ರಸಂಗ ಬಂತು.

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಯು. ಭೂಪತಿ.—ಸ್ವಾಮಿ ದಯಮಾಡಿ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ. ಇಲಾಖೆಯ ಡಿಮ್ಯಾಂಡ್ ಬರುತ್ತವೆ, ಆಗ ಮಾತನಾಡಬಹುದು.

ಶ್ರೀ ಯು. ಭೂಪತಿ.—ಸ್ವಾಮಿ, ಹೊಸಬರಿಗೆ ತಾವು ಅವಕಾಶ ಮಾಡಿಕೊಡಿ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಮಾಡಿ ಕೊಡಿ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ವರ್ಗಾವಣೆಯ ಬಗ್ಗೆ ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಅದು ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತಿದೆ ಎನ್ನುವ ಬಗ್ಗೆ ವಿವರಿಸಬೇಕು.

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಯು. ಭೂಪತಿ.—ಸ್ವಾಮಿ, ನಮ್ಮ ಅಭಿಪ್ರಾಯವನ್ನಾದರೂ ತಿಳಿಸುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಇಲ್ಲ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೊಸಬರು. ಅವರು ಬಹುಶಃ ಕೆ.ಇ.ಬಿ.ಯ ಎಕ್ಸಿಕ್ಯೂಟೀವ್ ಇಂಜಿನಿಯರ್ ಬಗ್ಗೆ ಪ್ರಶ್ನೆ ಕೇಳುತ್ತಿರಬಹುದು. ಆದರೆ ಅದು ಸರ್ಕಾರಿ ಸಂಸ್ಥೆಯಲ್ಲ. ಅದು ಒಂದು ಬೋರ್ಡ್. ಆ ಬಗ್ಗೆ ಪ್ರಶ್ನೆಯನ್ನು ಕೇಳುವುದಕ್ಕೆ ಇಲ್ಲಿ ಬರುವುದಿಲ್ಲ. ಒಂದು ವೇಳೆ ಪ್ರಶ್ನೆ ಕೇಳಿದರೆ ಉತ್ತರ ಯಾರು ಹೇಳುತ್ತಾರೆ ? ಆದ್ದರಿಂದ ಮಾನ್ಯ ಸದಸ್ಯರು ಕೆ.ಇ.ಬಿ.ಯ ರಿಪೋರ್ಟ್ ಚರ್ಚೆಗೆ ಬಂದಾಗ ವಿಷಯ ಪ್ರಸ್ತಾಪ ಮಾಡಲಿ. ಆಗ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ಆದರೆ ಈ ಸಮಯದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ.

ಗಡಿ ವಿವಾದ ಬಗ್ಗೆ ಅಧ್ಯಯನ ಸಮಿತಿಯಿಂ ವರದಿ

೨೯೮ (೨೮೪) ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ–ಮಹಾರಾಷ್ಟ್ರ ಸರ್ಕಾರೀ ಅಧಿಕಾರಿಗಳ ಗಡಿ ಅಧ್ಯಯನ ಸಮಿತಿಯು ವರದಿಯನ್ನು ಶಾಸಕರಿಗೆ ಕೊಡಲು ಸರ್ಕಾರವು ತೆಗೆದುಕೊಂಡ ಕ್ರಮವೇನು ?

ಆ) ಕರ್ನಾಟಕ–ಮಹಾರಾಷ್ಟ್ರ ಎರಡೂ ರಾಜ್ಯಗಳ ಅಧಿಕಾರಿಗಳಿಂದ ಸಮಗ್ರ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ ತಯಾರಿಸಿದ ಅಂದಾಜು ಮೊತ್ತವೆಷ್ಟು ?

ಇ) ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಸದನದ ವಿಶ್ವಾಸವನ್ನು ಪಡೆದುಕೊಳ್ಳಲು ಪ್ರಯತ್ನ ಮಾಡಿದ್ದು ನಿಜವೇ ?

ಈ) ಗಡಿ ಭಾಗದಲ್ಲಿರುವ ಸರ್ವ ಸಮಾಜದ ವಿದ್ಯಾವಂತ ಪದವೀಧರರ ನೌಕರಿಯ ಬಗ್ಗೆ ಸರ್ಕಾರದಿಂದ ಹಮ್ಮಿಕೊಳ್ಳಲಾವ ಕಾರ್ಯಕ್ರಮವೇನು ?

ಉ) ಕರ್ನಾಟಕ ಮಹಾರಾಷ್ಟ್ರ ವಿವಾದಾತ್ಮಕ ವಿಷಯವನ್ನು ಮೇಲಿಂದ ಮೇಲೆ ಚರ್ಚಿಸುವುದರಲ್ಲಿ ರಾಜಕೀಯ ಉದ್ದೇಶಕ್ಕೆ ಪ್ರಚೋದನೆ ಸಿಗುತ್ತದೆಯೇ ?

ಊ) ಕರ್ನಾಟಕ ಮಹರಾಷ್ಟ್ರ ಸೀಮಾ ಭಾಗದ ಜನರ ಮನಸ್ಸನ್ನು ಅರಿತುಕೊಳ್ಳಲು ಸರ್ಕಾರಿ ಅಧಿಕಾರಿಗಳಿಂದ ಆದಂತಹ ವಿಫಲತೆಯನ್ನು ಸರ್ಕಾರವು ಮನಗೊಂಡಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಗಳು).—

ಅ) ಕರ್ನಾಟಕ ಮಹಾರಾಷ್ಟ್ರ ಸರ್ಕಾರೀ ಅಧಿಕಾರಿಗಳ ಗಡಿ ಅಧ್ಯಯನ ಸಮಿತಿಯು ವರದಿಗಳು ಸ್ವಭಾವತ ಸರ್ಕಾರಕ್ಕೆ ನೀಡುವ ಅಧಿಕೃತ ಸಲಹೆ (official advise tendered to Govt) ಆದ್ದರಿಂದ ಅವುಗಳನ್ನು ಶಾಸಕರಿಗೆ ಕೊಡುವ ಅವಶ್ಯಕತೆ ಕಂಡು ಬರುವುದಿಲ್ಲ.